## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ರವರು ಪ್ರಸ್ತಾಪಿಸಿರುವ ನಿಯಮ-330ರ ಸೂಚನೆಗೆ ಉತ್ತರ.

**ವಿಷಯ:** ರಾಜ್ಯದಲ್ಲಿ ಮಂಗಳಮುಖಿಯರು ಸಮಾಜದ ಮುಖ್ಯ ವಾಹಿನಿಯಲ್ಲಿ ಶೋಷಣೆಗಳಿಗೆ ಒಳಪಡುತ್ತಿರುವುದರಿಂದ ಅವರ ಬದುಕನ್ನು ಸರ್ವಾಂಗೀಣವಾಗಿ ಅಭಿವೃದ್ಧಿ ಪಡಿಸಲು ಮತ್ತು ಸದರಿಯವರ ಮೇಲೆ ನಡೆಸುತ್ತಿರುವ ಶೋಷಣೆಯನ್ನು ತಪ್ಪಿಸಲು ಪ್ರತ್ಯೇಕ ನಿರ್ದೇಶನಾಲಯವನ್ನು ಹಾಗೂ ಗೃಹ ಇಲಾಖೆಯಲ್ಲಿ ಪ್ರತ್ಯೇಕ ಸೆಲ್‌ನ್ನು ಸ್ಥಾಪಿಸುವ ಬಗ್ಗೆ.

**ಉತ್ತರ:**

- ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ (ಸಿವಿಲ್) 400/2012 ನ್ಯಾಷನಲ್ ಲೀಗಲ್ ಸರ್ವೀಸ್ v/s ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಹಾಗೂ ರಿಟ್ ಪಿಟಿಷನ್ ಸಂಖ್ಯೆ (ಸಿವಿಲ್) 604/2013ರ ಪ್ರಕರಣಕ್ಕೆ ಸಂಬಂಧಿಸಿದಂತೆ, 15.04.2014ರ ತೀರ್ಪಿನಲ್ಲಿ ಅಸ್ತಿತ್ವದಲ್ಲಿರುವ ಅವಳಿ ಲಿಂಗಗಳ (ಗಂಡು ಮತ್ತು ಹೆಣ್ಣು) ಜೊತೆಗೆ ಟ್ರಾನ್ಸ್ ಜೆಂಡರ್ ರವರನ್ನು ತೃತೀಯ ಲಿಂಗಿಗಳೆಂದು ಮಾನ್ಯತೆ ನೀಡಿದೆ.

- ಸರ್ಕಾರದ ಆದೇಶ ಸಂ.ಮಮಇ 02 ಮಅನಿ 2018, ಬೆಂಗಳೂರು, ದಿನಾಂಕ:10-01-2018 ರಲ್ಲಿ ಕರ್ನಾಟಕ ರಾಜ್ಯ ಟ್ರಾನ್ಸ್ ಜೆಂಡರ್ ನೀತಿ-2017ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಒಟ್ಟು 19 ವಿವಿಧ ಇಲಾಖಾ ಅಧಿಕಾರಿಗಳನ್ನು ಒಳಗೊಂಡ ಕೋಶವನ್ನು ರಚಿಸಲಾಗಿರುತ್ತದೆ.

- ರಾಜ್ಯದಲ್ಲಿ "ಕರ್ನಾಟಕ ರಾಜ್ಯ ಟ್ರಾನ್ಸ್ ಜೆಂಡರ್ ನೀತಿಯನ್ನು 2017" ರನ್ವಯ ಟ್ರಾನ್ಸ್ ಜೆಂಡರ್ ರವರ ಮೂಲ ಹಂತದ ಸಮೀಕ್ಷೆಯನ್ನು ರಾಜ್ಯದ 31 ಜಿಲ್ಲೆಗಳಲ್ಲಿ 15ನೇ ಸೆಪ್ಟೆಂಬರ್ 2025 ರಿಂದ 21ನೇ ನವೆಂಬರ್ 2025 ರವರೆಗೆ ಕೈಗೊಳ್ಳಲಾಗಿದ್ದು ಸಮೀಕ್ಷೆಯಿಂದ ಒಟ್ಟಾರೆ 10,365 ಟ್ರಾನ್ಸ್ ಜೆಂಡರ್ ರವರು ಇರುವುದು ತಿಳಿದು ಬಂದಿರುತ್ತದೆ.

- ಸರ್ಕಾರದ ಆದೇಶ ಸಂ.ಮಮಇ 87 ಮಅನಿ 2018, ಬೆಂಗಳೂರು, ದಿನಾಂಕ:29-01-2019ರಲ್ಲಿ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಉಸ್ತುವಾರಿ ಸಮಿತಿ/ಕೋಶ, ತಾಲ್ಲೂಕು ಮಟ್ಟದ ಸಮಿತಿ ಮತ್ತು ಬೆಂಬಲ ಘಟಕವನ್ನು ರಚಿಸಿ ಸದರಿ ಸಮಿತಿ/ಕೋಶಗಳು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ವಿವರವಾಗಿ ತಿಳಿಸಲಾಗಿದೆ.

- ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಕಛೇರಿಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಸಹಾಯವಾಣಿ ಸಂಖ್ಯೆ 1800 599 2025

ಅನ್ನು ಆರಂಭಿಸಲಾಗಿದ್ದು, ಕರೆಗಳನ್ನು ಸ್ವೀಕರಿಸಲು ಸಮುದಾಯದ ವ್ಯಕ್ತಿಯನ್ನು ನೇಮಕ ಮಾಡಲಾಗಿದೆ.

- ಸರ್ಕಾರದ ಆದೇಶ ಸಂಖ್ಯೆ WCD 104 KSW 2025, Date:-11-11-2025 ರನ್ವಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು ಇವರನ್ನು ರಿಟ್ ಪಿಟೀಷನ್ (civil no.1405/2023)ಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಮೇರೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಚಿಸಿರುವ Advisory Committeeಗೆ ಮಾಹಿತಿ ನೀಡಲು ನೋಡಲ್ ಅಧಿಕಾರಿಯೆಂದು ನೇಮಕ ಮಾಡಲಾಗಿದೆ.

- ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 179 ಸೆನೆನಿ 2020, ಬೆಂಗಳೂರು ದಿನಾಂಕ:-14-07-2021 ರಲ್ಲಿ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9 ರನ್ವಯ ರಾಜ್ಯ ಸಿವಿಲ್ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ಸಮತಳ ಶೇಕಡ 1 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ.

- ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಕಾರ್ಯಕ್ರಮಗಳಲ್ಲಿ ಆರ್ಥಿಕ ಸೌಲಭ್ಯ ನೀಡಲಾಗುತ್ತಿದೆ.

- ರಾಜ್ಯದಲ್ಲಿನ Transgender Welfare Board ರಚಿಸಲು ಭಾರತ ಸರ್ಕಾರವು Model Transgender Welfare board composition for State / UTs ನೀಡಿದ್ದು, ಅದರಂತೆ ಪ್ರಸುತ್ತ ಸಮೀಕ್ಷೆಯ ಕಾರ್ಯವು ಮುಗಿದಿರುವುದರಿಂದ ರಚನೆಗೆ ಕ್ರಮ ವಹಿಸಲಾಗುವುದು.

- ಮಂಗಳಮುಖಿಯರ ಬದುಕನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಲು, ಇವರ ಮೇಲಿನ ಶೋಷಣೆ ತಪ್ಪಿಸಲು ಸುತ್ತೋಲೆ ಸಂಖ್ಯೆ: 55/ಜಿಸಿ/ಎನ್‌ಹೆಚ್‌ಆರ್‌ಸಿ/2024, ದಿನಾಂಕ: 09.09.2024 ರಲ್ಲಿ ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ರವರನ್ನು Head of Transgender Protection Cell ಎಂದು ನಾಮನಿರ್ದೇಶನ ಮಾಡಿ, ಅವರ ನಿರ್ದೇಶನದಲ್ಲಿ Cell ತೆರೆಯಲಾಗಿರುತ್ತದೆ ಹಾಗೂ ಸಹಾಯಕ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ಸಾಮಾನ್ಯ) ರವರನ್ನು Transgender Protection Cell ನೋಡಲ್ ಅಧಿಕಾರಿಯಾಗಿ ನೇಮಕ ಮಾಡಲಾಗಿರುತ್ತದೆ .

- ಸದರಿ ಸುತ್ತೋಲೆಯಲ್ಲಿ ಪೊಲೀಸ್ ಆಯುಕ್ತರು ಮತ್ತು ಜಿಲ್ಲಾ ಪೊಲೀಸ್ ಅಧೀಕ್ಷಕರು ತಮ್ಮ ವ್ಯಾಪ್ತಿಯ ನಗರ / ಜಿಲ್ಲೆಯಲ್ಲಿ ತೃತೀಯ ಲಿಂಗಿಗಳ ರಕ್ಷಣೆಗಾಗಿ ಒಬ್ಬರು ನೋಡಲ್ ಅಧಿಕಾರಿಯನ್ನು ಹಾಗೂ ಜಿಲ್ಲೆಯ ಪ್ರತಿಯೊಂದು ಪೊಲೀಸ್ ಠಾಣೆಯಿಂದ ಒಬ್ಬ ಸಿಬ್ಬಂದಿಯನ್ನು Focal Point Officer ಆಗಿ ನೇಮಿಸುವಂತೆ ನಿರ್ದೇಶಿಸಲಾಗಿರುತ್ತದೆ. ಅದರನ್ವಯ ಪ್ರತಿ ನಗರ / ಜಿಲ್ಲೆ ಹಾಗೂ ಪೊಲೀಸ್ ಠಾಣೆಗಳಲ್ಲಿ ತಲಾ ಒಬ್ಬರು ಅಧಿಕಾರಿಯನ್ನು ನೋಡಲ್ ಅಧಿಕಾರಿ ಹಾಗೂ Focal Point Officer ಆಗಿ ನೇಮಿಸಲಾಗಿರುತ್ತದೆ.

- ಟ್ರಾನ್ಸ್‌ಜೆಂಡರ್ Focal Point Officer ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಕಾಲಕಾಲಕ್ಕೆ ಸೂಕ್ತ ತರಬೇತಿ ಹಾಗೂ ಮಾರ್ಗದರ್ಶನ ನೀಡಲಾಗುತ್ತಿದೆ. 'ಮನೆ ಮನೆಗೆ ಪೊಲೀಸ್' ಕಾರ್ಯಕ್ರಮದಡಿ ಬೀಟ್ ಪೊಲೀಸರು ಮತ್ತು ಅಧಿಕಾರಿಗಳು ತೃತೀಯ ಲಿಂಗಿಯರುಗಳ ಮನೆಗೆ ಭೇಟಿ ನೀಡಿ ಕಾನೂನಿನ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಪೊಲೀಸ್ ಮತ್ತು ಇತರೆ ಇಲಾಖೆಗಳ ಸಮುದಾಯ ಆಧಾರಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸಂವೇದನಾಶೀಲತೆ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿರುತ್ತದೆ. ತೃತೀಯ ಲಿಂಗಿಯರ ಸಮುದಾಯದ ಕುರಿತು ಸಮೂಹ ಮಾಧ್ಯಮ ಮತ್ತು ಇತರೆ ಪ್ರಚಾರ ಆಂದೋಲನಗಳ ಮುಖಾಂತರ ಸಾರ್ವಜನಿಕರನ್ನು ಸಂವೇದನೆಗೊಳಿಸಲು ಜಿಲ್ಲಾಡಳಿತದೊಂದಿಗೆ ಅರಿವು ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಸೂಚಿಸಲಾಗಿರುತ್ತದೆ.

- ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರು ರವರು ರಾಜ್ಯದ ಎಲ್ಲಾ ಘಟಕಾಧಿಕಾರಿಗಳನ್ನೊಳಗೊಂಡು ಹಮ್ಮಿಕೊಳ್ಳಲಾದ ದಿನಾಂಕ: 06.02.2026 ದಕ್ಷಿಣ ವಲಯ, ಮೈಸೂರು, ದಿನಾಂಕ: 07.02.2026 ರಂದು ಉತ್ತರ ವಲಯ, ಬೆಳಗಾವಿ, ದಿನಾಂಕ: 09.02.2026 ರಂದು ಪಶ್ಚಿಮ ವಲಯ, ಮಂಗಳೂರು, ದಿನಾಂಕ: 10.02.2026 ರಂದು ಕೇಂದ್ರ ವಲಯ, ಬೆಂಗಳೂರು, ದಿನಾಂಕ: 23.02.2026 ರಂದು ಪೂರ್ವ ವಲಯ, ದಾವಣಗೆರೆ, ದಿನಾಂಕ: 23.02.2026 ರಂದು ಬಳ್ಳಾರಿ ವಲಯ, ಬಳ್ಳಾರಿ ಮತ್ತು ಕಲಬುರಗಿ ವಲಯ, ಕಲಬುರಗಿ ರವರುಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಸಭೆಗಳಲ್ಲಿ ಅಧಿಕಾರಿಗಳೊಂದಿಗೆ ತೃತೀಯ ಲಿಂಗಿಗಳ ರಕ್ಷಣೆ ಕುರಿತಂತೆ ಪ್ರಸ್ತಾಪಿಸಿ, ತಮ್ಮ ಘಟಕಗಳಲ್ಲಿ ಹಮ್ಮಿಕೊಳ್ಳುವ ಜನಸಂಪರ್ಕ ಸಭೆ ಕಾರ್ಯಕ್ರಮಗಳಲ್ಲಿ ಸದರಿಯವರುಗಳ ಕೋರಿಕೆಗಳನ್ನು ಮತ್ತು ಕುಂದುಕೊರತೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವಂತೆ ಹಾಗೂ ಇವರುಗಳ ವಿರುದ್ಧ ದಾಖಲಾಗುವ ಪ್ರಕರಣಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ವಿಳಂಬ ಮಾಡದೇ ವಿಚಾರಣೆ ಮಾಡಿ ತ್ವರಿತವಾಗಿ ಇತ್ಯರ್ಥಪಡಿಸುವಂತೆ ನಿರ್ದೇಶನ ನೀಡಿರುತ್ತಾರೆ.

- ಎ.ಡಿ.ಜಿ.ಪಿ, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಮುಖ್ಯಸ್ಥರು Transgender Protection Cell ರವರು ಎಲ್ಲಾ ಘಟಕಾಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿ ಟ್ರಾನ್ಸ್‌ಜೆಂಡರ್ ಸಮುದಾಯದ ವಿರುದ್ಧ ದಾಖಲಾಗುವ ಅಪರಾಧ ಪ್ರಕರಣಗಳ ಕುರಿತು ವಿಮರ್ಶೆ ಮಾಡಿ ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ದೋಷಾರೋಪಣಾ ಪಟ್ಟಿಯನ್ನು ಅಂತಿಮವಾಗಿ ನ್ಯಾಯಾಲಯಕ್ಕೆ ತ್ವರಿತವಾಗಿ ಸಲ್ಲಿಸಿ, ಪ್ರಕರಣಗಳನ್ನು ಇತ್ಯರ್ಥಪಡಿಸಲು ನಿರ್ದೇಶನ ನೀಡಿರುತ್ತಾರೆ.

- ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಕುರಿತು ಅನುಸರಿಸಬೇಕಾದ ಕ್ರಮಗಳ ಬಗ್ಗೆ, ಎ.ಡಿ.ಜಿ.ಪಿ, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಮುಖ್ಯಸ್ಥರು Transgender Protection Cell ರವರು ಪೊಲೀಸ್ ಪ್ರಧಾನ ಕಛೇರಿಯಿಂದ ಸುತ್ತೋಲೆ ಸಂಖ್ಯೆ: ಕಾನೂಸು(1)/05/2021-22, ದಿನಾಂಕ: 27.02.2026 ಅನ್ನು ಹೊರಡಿಸಲಾಗಿರುತ್ತದೆ.

**ಸಂಖ್ಯೆ: ಹೆಚ್‌ಡಿ 18 ಎಸ್‌ಡಿಎಸ್ 2026.**

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು